ಮಾರುವುದರಲ್ಲಿ ಇವರಾಗಲೀ ನನಗಾಗಲೀ ಬೇಸರವೇ ಇರಲಿಲ್ಲ' ಎಂದು ಸದಾಶಿವ ಶೆಟ್ಟರಲ್ಲಿ ತನ್ನ ತಲ್ಲಣಗಳನ್ನು ಹಂಚಿಕೊಂಡು ಸರೋಜಮ್ಮ, 'ನಾವು ಊರು ಬಿಟ್ಟು ಹೋಗುವುದಾದರೆ ಆ ರಾಂಪುರಕ್ಕೇ ಮತ್ತೆ ಹೋಗಬೇಕು. ಅಲ್ಲಿ ನಮ್ಮ ಹಿತಚಿಂತಕರು ಈಗಲೂ ಇದ್ದಾರೆ! ಇಂಥ ಸಂದರ್ಭವೇನಾದರೂ ರಾಂಪುರದಲ್ಲಿ ಆಗುತ್ತಿದ್ದರೆ ಇವರ ಹಳೆ ವಿದ್ಯಾರ್ಥಿಗಳೆಲ್ಲ ದೂರ ನಿಲ್ಲುವವರಲ್ಲ! ಹೆಚ್ಚೇಕೆ, ಬಸವೇಶ್ವರ ಕಾಲೇಜ್ ಟ್ರಸ್ಟ್‌ನ ಅಧ್ಯಕ್ಷ ಪಾಟೀಲರು ಕೂಡಾ ನಮ್ಮ ಬೆಂಗಾವಲಿಗೆ ತಕ್ಷಣ ಬರುತ್ತಿದ್ದರು. ಆದರೆ ಇದು ದರಿದ್ರ ಊರು. ಇಲ್ಲಿಗಿಂತ ಆ ರಾಂಪುರವೇ ಸಾವಿರ ಪಾಲು ವಾಸಿ' ಎಂದರು.

ಶೆಟ್ಟರಿಗೆ ಇನ್ನು ಈಯಮ್ಮನನ್ನು ಗೋಗರೆಸುವುದು ಸರಿ ಅಲ್ಲ ಅನಿಸಿತು. ಅವರು, 'ಅದೆಲ್ಲ ಈಗ ಬೇಡ ಸರೋಜಕ್ಕ, ಮತ್ತೆ ಆಲೋಚಿಸೋಣ. ನಿಜ ಹೇಳೋದಾದರೆ ನಮ್ಮ ಕಂಪ್ಲೆಂಟನ್ನು ಎಸ್.ಐ. ತಗೊಂಡಿದ್ದಾರೆ. ಅಷ್ಟೇ ಅಲ್ಲ, ಖಂಡಿತ ತನಿಖೆ ನಡೆಸುತ್ತೇನೆ ಎಂದದ್ದೂ ಅಲ್ಲದೆ, ನಾಳೆ ಸೀತಾಪುರದ ರಥಬೀದಿಗೆ ಮಾತ್ರವಲ್ಲ, ಇಲ್ಲಿಗೂ ಅವರು ಬರಬಹುದು! ನೀವು ಧೈರ್ಯಗೆಡಬೇಡಿ, ಊರು ಬಿಡಬೇಡಿ ಎಂದು ಖುದ್ದು ಎಸ್.ಐ. ಧೈರ್ಯ ಹೇಳಿದ್ದಾರೆ' ಎಂದು ನಕ್ಕರು. ಆಮೇಲೆ 'ಅಕ್ಕ, ಆ ಎಸ್.ಐ. ಸಾಹೇಬರು ಯಾರು ಗೊತ್ತಾ?' ಎಂದು ಸರೋಜಮ್ಮನ ಕುತೂಹಲ ಕೆರಳಿಸಿದರು.

'ಯಾರು?'

'ನೀವು ಪಿಯುಸಿ ಓದುವಾಗ ನಿಮಗೆ ಶಿವರಾಮ ಶೆಟ್ಟಿ ಎನ್ನುವ ಕ್ಲಾಸ್‌ಮೇಟ್ ಇದ್ದಾ?'

'ಹೌದು ಅಂತ ಕಾಣುತ್ತೆ. ಸರಿ ನೆನಪು ಬರೋದಿಲ್ಲ.'

'ಅವನೇ ಅಂತ ಇಟ್ಟುಕೊಳ್ಳಿ.'

'ಹೌದಾ? ದೇವರೇ! ಒಳ್ಳೆದಾಯಿತು. ಬಿಡಿ. ಏನಂದ ಅವನು?'

'ನೀವು ಮತ್ತು ರಾಯರು ಹೇಗೆ ಮದುವೆ ಆದದ್ದು ಎಂಬುದನ್ನೆಲ್ಲ ಆತ ನನಗೆ ವಿವರಿಸಿದ. ನನಗೆ ಗೊತ್ತಿಲ್ಲದ್ದೆಲ್ಲ ಅವನ ಬಾಯಿಯಿಂದ ಕೇಳಿ ನಾನು ತುಂಬಾ ಖುಷಿಪಟ್ಟೆ. ನಿಮ್ಮದು ಲವ್ ಮ್ಯಾರೇಜ್ ಎಂದಷ್ಟೇ ನನಗೆ ಗೊತ್ತಿತ್ತು. ಆದರೆ ಅದು ಹೇಗೆ ಆದದ್ದು ಇತ್ಯಾದಿ ನಾನು ಕೇಳಿರಲಿಲ್ಲ. ನೀವೂ ಹೇಳಿರಲಿಲ್ಲ! ಆದರೆ ಈಗ ಅದು ಟಾಂ ಟಾಂ ಆಯ್ತು ನೋಡಿ!' ಎಂದ ಸದಾಶಿವ ಶೆಟ್ಟರು, 'ನಾನು ಈಗ ಅದನ್ನು ನನ್ನ ಹೆಂಡ್ತಿಗೆ ಹೇಳಿದರೆ ಆಕೆ ನಾಳೆ ಬೆಳಗ್ಗೆಯೇ ನಿಮ್ಮಲ್ಲಿ ಬಂದು ಯಾಕೆ ಈ ತನಕ ಇದನ್ನು ನನಗೆ ಹೇಳಿರಲಿಲ್ಲ ಎಂದು ನಿಮ್ಮನ್ನು ಹಂಗಿಸ್ತಾಳೆ' ಎಂದೂ ಆಡಿದರು.

ಸರೋಜಮ್ಮ ಮಾತನಾಡಲಿಲ್ಲ. ಅವರ ಮುಖ ಅರಳಿತು. 'ಲೌವಾ ಬೌವಾ? ನಿಮ್ಮ ರಾಯರಿದ್ದಾರಲ್ಲ. ಟ್ಯೂಶನ್ ನೆಪದಲ್ಲಿ ನಮ್ಮ ಮನೆಗೆ ಬಂದು ನನ್ನನ್ನು ಪರವಶಮಾಡಿಕೊಂಡ್ರು. ಆಮೇಲೆ ಇವರಿಲ್ಲದೆ ನಾನು ಬದುಕುವುದು ಸಾಧ್ಯವಿಲ್ಲ ಎಂಬಂತಾಯಿತು. ಇವರೋ ಪಕ್ಕಾ ಆಸಾಮಿ, ಆ ಸಮಯದಲ್ಲಿ ಇವರು ನಮ್ಮ ಕಾಲೇಜಿಗೆ ರಾಜೀನಾಮೆ ಕೊಟ್ಟು ರಾಂಪುರಕ್ಕೆ ಓಡಿಹೋದ್ರು. ಹೋಗುವಾಗ ಮಾತ್ರ ಒಂದು ಮಾತು ಹೇಳಿದ್ರು. ಅದು 'ನಾನು ಈ ಜನ್ಮದಲ್ಲಿ ನಿನ್ನನ್ನು ಬಿಟ್ಟು ಬೇರೆ ಯಾರನ್ನೂ ಮದುವೆ ಆಗುವುದಿಲ್ಲ' ಎಂದು! ನಿನ್ನದು ಡಿಗ್ರಿಯಾಗಲಿ. ಆತನಕ ಇಬ್ಬರೂ ಕಾಯೋಣ. ಡಿಗ್ರಿ ಆದ ಮೇಲೆ ನಾವು ಹೇಗೆ ಮದುವೆ ಆಗಬೇಕು ಎಂಬುದನ್ನು ಮತ್ತೆ ನಿಶ್ಚಯಿಸೋಣ ಎಂದು ಇವರು ಅಂದದ್ದರಲ್ಲಿ ನನಗೆ ನಂಬಿಕೇನೆ ಆಗ ಇರಲಿಲ್ಲ. ಆದರೆ ಇವರು ತಪ್ಪದೇ ಆಗೊಮ್ಮೆ ಈಗೊಮ್ಮೆ ನನಗೆ ಪತ್ರ ಬರೆಯುತ್ತಿದ್ದರು. ನನ್ನ ಕ್ಲಾಸ್‌ಮೇಟ್ ರೋಹಿಣಿ ಶೆಣೈ ಎನ್ನುವವಳಿದ್ದಳು. ಅವಳು ಈ ವಿಚಾರದಲ್ಲಿ ನನಗೆ ತುಂಬಾ ಹೆಲ್ಪ್ ಮಾಡಿದ್ದಳು. ಅವಳ ಅಪ್ಪ, ಅಮ್ಮ, ಅಣ್ಣ ಎಲ್ಲರೂ ತುಂಬಾ ಒಳ್ಳೆಯವರು.

ರೋಹಿಣಿಗೆ ನಮ್ಮ ಪ್ರೇಮ ಪ್ರಕರಣ ತಿಳಿದಾಗ ಆಕೆಯೇ ನನ್ನನ್ನು ತನ್ನ ಮನೆಗೆ ಕರೆಸಿ ಧೈರ್ಯ ಹೇಳಿದ್ದಳು. ಅವಳ ಅಪ್ಪ ರಮಾಕಾಂತ ಶೆಣೈ ಅವರು, 'ನೋಡು ಮಗಾ, ಈಗ ನೀನು ಮದುವೆಯ ವಿಚಾರದಲ್ಲಿ ತಲೆಕೆಡಿಸಿಕೊಳ್ಳಬಾರದು. ಚೆನ್ನಾಗಿ ಓದಿ ಡಿಗ್ರಿ ಮುಗಿಸು. ಆಮೇಲೆ ಎಲ್ಲಾ ವಿಚಾರ ಪರಿಶೀಲಿಸೋಣ' ಎಂದು ನನ್ನನ್ನು ಸಮಾಧಾನಪಡಿಸಿದ್ದರು. ಆಗ ನನ್ನ ಕಣ್ಣು ತುಂಬಿ ಬಂದಿತ್ತು. ಅದನ್ನು ನೋಡಿದ ಅವರು ನನ್ನ ತಲೆನೇವರಿಸಿ,

'ನೀನು ಹದಿನೈದೋ ಇಪ್ಪತ್ತೋ ದಿನಕ್ಕೊಮ್ಮೆ ನಿನ್ನ ಪ್ರಿಯತಮನಿಗೆ ಪತ್ರ ಬರೆ. ಅವರು ಅದಕ್ಕೆ ಉತ್ತರ ಬರೆಯುವಾಗ ಕೇರ್ ಆಫ್ ರಮಾಕಾಂತ ಶೆಣೈ ಅಂತ ನನಗೇ ಬರೆಯಲಿ' ಎಂದು ನಮ್ಮನ್ನು ತುಂಬಾ ಪ್ರೋತ್ಸಾಹಿಸಿದ್ದರು. ನಾನು ಅವರು ಹೇಳಿದ ಹಾಗೇ ಆಗೊಮ್ಮೆ ಈಗೊಮ್ಮೆ ಈ ನಿಮ್ಮ ರಾಯರಿಗೆ ಪತ್ರ ಬರೆಯುತ್ತಿದ್ದೆ. ನಿಮ್ಮ ಈ ರಾಯರು ನಾನು ಖುಷಿಯಿಂದ ಕಣ್ಣೀರಿಳಿಸುವಷ್ಟು ಸೊಗಸಾಗಿ ಪ್ರೇಮಪತ್ರ ಬರೆಯುತ್ತಿದ್ದರು. ಅದನ್ನು ಓದಿದ ನಾನು ಎಷ್ಟೋ ಸಲ ಇಲ್ಲಿಂದ ಅವರಿದ್ದಲ್ಲಿಗೆ ಓಡಿ ಬಿಡಬೇಕು ಅಂತ ಯೋಚಿಸಿದ್ದುಂಟು. ಆದರೆ ರಾಯರು ಪ್ರತೀ ಪತ್ರದಲ್ಲಿ 'ನಾನು ನಿನ್ನ ಒಳಗೇ ಇದ್ದೇನೆ. ಚಿಂತಿಸಬೇಡ ಪ್ಲೀಸ್' ಎಂದು ಹೇಳಿ ಓದು ಓದು ಓದು ಎಂದು ಓದಲು ಒತ್ತಾಯಿಸುತ್ತಿದ್ದರು. ಆದರೂ 'ನಾನೊಮ್ಮೆ ನಿಮ್ಮನ್ನು ನೋಡಲೇಬೇಕು' ಎಂದದ್ದಕ್ಕೆ 'ನೀನು ರಮಾಕಾಂತ ಶೆಣೈ ಅವರ ಒಪ್ಪಿಗೆ ಪಡೆದರೆ ಒಂದು ರಾತ್ರೆ ನಾನು ಇಲ್ಲಿಂದ ಹೊರಟು ಮರುದಿನ ಬೆಳಗ್ಗೆ ಕುಂದಾಪುರಕ್ಕೆ ಬಂದು ಶೆಣೈಯವರ ಮನೆಯಲ್ಲೆ ತಂಗಬಲ್ಲೆ. ನೀನು ಕಾಲೇಜಿಗೆ ಚಕ್ಕರ್ ಹೊಡೆದು ಅಲ್ಲಿಗೆ ಬಂದರೆ ನಾವು ಬಾಯ್ತುಂಬ ಮಾತನಾಡಬಹುದು. ಕಣ್ತುಂಬ ನೋಡಬಹುದು' ಎಂದು ಬರೆದಿದ್ದರು.

ನಾನು ಈ ವಿಚಾರವನ್ನು ರೋಹಿಣಿ ಶೆಣೈಯವರ ಮೂಲಕ ರಮಾಕಾಂತ ಶೆಣೈಯವರ ಗಮನಕ್ಕೆ ತಂದಾಗ ಅವರು 'ಖಂಡಿತ ಬರಲಿ. ಆದರೆ ನಮ್ಮ ಮನೆ ಬಿಟ್ಟು ಇಬ್ಬರೂ ಹೊರಗೆ ಹೋಗುವ ಹಾಗಿಲ್ಲ' ಎಂದು ಒಪ್ಪಿಗೆ ಕೊಟ್ಟಿದ್ದರು. ಈ ನೆಲೆಯಲ್ಲಿ ರಾಯರು ಶೆಣೈ ಅವರ ಮನೆಗೆ ಬಂದಾಗ ನಾನು ಅವರ ಸಾಮೀಪ್ಯವನ್ನು ಹತ್ತಿರದಿಂದ ಸವಿದೆ. ಶೆಣೈಯವರು ಆ ದಿನ ನಾವು ಎಷ್ಟು ಹೊತ್ತು ಹರಟುತ್ತಾ ಕುಳಿತರೂ ಅಡ್ಡಿಪಡಿಸಲಿಲ್ಲ. ಅಷ್ಟೇ ಅಲ್ಲ, ಅವರ ಪತ್ನಿ ರಮಾಬಾಯಿ ನಮಗೆ ಬೇಕು ಬೇಡ ಎನ್ನುವಷ್ಟು ಊಟ ತಿಂಡಿ ಪೂರೈಸಿದ್ದರು. ಶೆಣೈ ಅವರಿಗೆ ಯಾಕೆ ನನ್ನಲ್ಲಿ ಇಂಥ ಪ್ರೀತಿ ಎಂದು ನಾನು ಒಮ್ಮೆ ರೋಹಿಣಿ ಶೆಣೈಯಲ್ಲಿ ಕೇಳಿದ್ದಕ್ಕೆ ಆಕೆ, 'ನನ್ನ ದೊಡ್ಡ ಅಕ್ಕ ಎಂ.ಎ. ಓದಿದ ಮೇಲೆ ಅವರ ಕ್ಲಾಸ್‌ಮೇಟನ್ನು ಮದುವೆಯಾಗುತ್ತೇನೆ ಎಂದಿದ್ದಳು. ಆತ ಬಂಟರ ಹುಡುಗ. ಅಮ್ಮನಿಗೆ ಅದು ಇಷ್ಟ ಇರಲಿಲ್ಲ. ಅಪ್ಪ ಆಕ್ಷೇಪವೇ ಎತ್ತದೆ, ನಮ್ಮ ಶಿವರಾಮ ಕಾರಂತರು ಮದುವೆಯಾಗಲಿಲ್ಲವೇ ಬಂಟರ ಹುಡುಗಿಯನ್ನು, ಹಾಗೇ ಇವಳೂ ಬಂಟರ ಹುಡುಗನನ್ನು ಮದುವೆಯಾದರೆ ತಪ್ಪೇನು?' ಎಂದು ಪ್ರೋತ್ಸಾಹಿಸಿದ್ದರು.

ಯಾಕೆಂದರೆ ರಮಾನಂದ ಶೆಣೈ ಅವರಿಗೆ ಕಾರಂತರೆಂದರೆ ದೇವರು ಎಂಬ ಭಾವನೆ ಇತ್ತು. ಕಾರಂತರು ಪುತ್ತೂರಿನಲ್ಲಿರುವಾಗ ಅಲ್ಲಿಂದ ಉಡುಪಿಗೆ ಬಂದು ಕಲ್ಯಾಣಪುರ ಹೊಳೆ ದಾಟಿದ್ದು ಗೊತ್ತಾದರೆ ಈ ಶೆಣೈ ಮಾವ ಕಾರಂತರನ್ನು ಭೇಟಿ ಮಾಡಲು ಓಡುತ್ತಿದ್ದರಂತೆ. ಎರಡು ಮೂರು ಬಾರಿ ಕಾರಂತರು ಶೆಣೈಯವರ ಮನೆಯಲ್ಲಿ ಉಂಡದ್ದೂ ಇತ್ತಂತೆ. ನಾನು ಶೆಣೈಯವರ ಮನೆಯಲ್ಲಿ ಕಾರಂತರ ಬಹುತೇಕ ಕೃತಿಗಳನ್ನು ನೋಡಿದ್ದೇನೆ' ಎಂದು ಸರೋಜಮ್ಮ ಎನ್ನುತ್ತಿದ್ದ ಹಾಗೇ ರಾಯರಿಗೆ ಉಲ್ಲಾಸ ಬಂದಂತಾಗಿ 'ಉಳಿದದ್ದನ್ನು ನಾನು ಹೇಳ್ತೇನೆ ಮಾರಾಯ್ರೆ. ಎಲ್ಲಾ ನನ್ನದೇ ಕಿತಾಪತಿ ಅಂತ ಈ ಸದಾಶಿವ ಶೆಟ್ಟರು ತರ್ಕಿಸುವುದು ಬೇಡ' ಎಂದು ನಗುತ್ತ 'ಏನು ಹೇಳ್ತೀರಿ ಶೆಟ್ಟರೇ?' ಎಂದರು.

ಸದಾಶಿವ ಶೆಟ್ಟರಿಗೆ ಖುಷಿಯಾಯಿತು. ಅವರು 'ನನಗೆ ಇಂಥ ಲವ್ ಗಿವ್ ಮಾಡುವ ಅವಕಾಶವೇ ಬರಲಿಲ್ಲವಲ್ಲ ಎಂದು ಈಗ ಬಹಳ ದುಃಖವಾಗುತ್ತದೆ ರಾಯರೇ' ಎಂದು ನಗೆಚಟಾಕಿ ಹಾರಿಸಿದರು. ತಕ್ಷಣ ರಾಯರು ನಗುತ್ತಾ 'ನಿಮಗೆ ನಾನು ಇವಳನ್ನು ಹೇಗೆ ಪಾಕೆಟ್ ಮಾಡಿದೆ ಅಥವಾ ಇವಳು ನನ್ನನ್ನು ಹೇಗೆ ಪಾಕೆಟ್ ಮಾಡಿದ್ದು ಎಂಬ ಕುತೂಹಲ ಇದ್ದರೆ ಕೇಳಿ, ಹೇಳುತ್ತೇನೆ' ಎಂದರು.

'ಖಂಡಿತ ಕುತೂಹಲ ಇದೆ ರಾಯರೇ. ಇವತ್ತು ನಾನು ಇದನ್ನೆಲ್ಲ ಕೇಳಿಸಿಕೊಂಡೇ ಮನೆಗೆ ಹೋಗುವುದು' ಎಂದರು ಶೆಟ್ಟರು.

ರಾಯರು 'ನೋಡಿ ಶೆಟ್ಟರೇ, ನಮ್ಮ ಲವ್ ಸ್ಟಾರ್ಟ್ ಆದದ್ದು ಒಂದು ವಿಶಿಷ್ಟ ರೀತಿಯಲ್ಲಿ. ನಮ್ಮದು ಎಂದು ಏನು ಎಲ್ಲರದ್ದೂ ಪ್ರಾಯಶಃ ಹೀಗೆ ಇರಬಹುದು' ಎಂದು ಪಕ್ಕದಲ್ಲಿ ನಿಂತೇ ಇದ್ದ ಹೆಂಡತಿಯನ್ನು ನೋಡಿ 'ಹೇಳಲೇ ಬೇಡವೇ?' ಎಂದು ಪ್ರಶ್ನಿಸಿದಾಗ ಆಕೆ, 'ಹೇಳಿ ನನಗೇನು? ಆದರೆ ಅದರಲ್ಲಿ ಏನಾದರೂ ಇಲ್ಲದ್ದನ್ನು ಹೇಳಿ ತಮಾಷೆ ಮಾಡಿದರೆ ಖಂಡಿತ ನಾನು ನಿಮ್ಮನ್ನು ಖಂಡಿಸುತ್ತೇನೆ' ಎಂದರು ಸರೋಜಮ್ಮ.

'ಇವಳು ಆಗ ಹೇಗಿದ್ದಳು ಅಂದರೆ ಸಿನಿಮಾ ತಾರೆ ಕಲ್ಪನಾರ ನೆನಪಾಗುತ್ತಾ ನಿಮಗೆ, ಹಾಗೆ ಇದ್ದಳು ಅಂತ ಇಟ್ಟುಕೊಳ್ಳಿ' ಎಂದು ಪ್ರಾರಂಭಿಸಿದ